# ಹಲವು ಮಾರ್ಗಗಳು



❋ ಎಲ್ಲರೂ ಅವನನ್ನೇ ಕರೆಯುವುದು ಎಂದು ನಾನು ಹೇಳುತ್ತೇನೆ. ಅಲ್ಲಿ ತನ್ನ, ಪರ ಏತಕ್ಕೆ? ಕೆಲವರು ಸಾಕಾರ ಎಂದು ಹೇಳುತ್ತಾರೆ, ಕೆಲವರು ನಿರಾಕಾರ ಎಂದು ಹೇಳುತ್ತಾರೆ. ನಾನು ಯಾರಿಗೆ ಸಾಕಾರದಲ್ಲಿ ವಿಶ್ವಾಸವೊ ಅವರು ಸಾಕಾರವನ್ನೇ ಚಿಂತಿಸಲಿ, ಯಾರಿಗೆ ನಿರಾಕಾರ ದಲ್ಲಿ ವಿಶ್ವಾಸವೊ ಅವರು ನಿರಾಕಾರವನ್ನೇ ಚಿಂತಿ ಸಲಿ ಎಂದು ಹೇಳುತ್ತೇನೆ. ಆದರೆ ಒಟ್ಟಿನಲ್ಲಿ ಹೀಗೆ ಹೇಳಬಹುದು: ಸ್ವಮತ ಭ್ರಾಂತಿ ಒಳ್ಳೆಯ ದಲ್ಲ— ಅಂದರೆ, ನನ್ನ ಧರ್ಮವೇ ಸರಿ, ಉಳಿ ದವರದೆಲ್ಲ ತಪ್ಪು ಎಂಬುದು.

❋ ನನ್ನ ಧರ್ಮ ಸರಿಯಾದುದೆ; ಉಳಿದವರದು ಸರಿಯೊ ತಪ್ಪೊ, ಸತ್ಯವೊ ಮಿಥ್ಯವೊ ಅದು ನನಗೆ ಸರಿಯಾಗಿ ಗೊತ್ತಾ ಗುವುದಿಲ್ಲ — ಈ ಭಾವ ಒಳ್ಳೆಯದು. ಏಕೆಂದರೆ ಭಗವಂತನ ಸಾಕ್ಷಾತ್ಕಾರ ಆಗದ ತನಕ ಆತನ ಸ್ವರೂಪವನ್ನು ಅರಿತುಕೊಳ್ಳಲಾಗು ವುದಿಲ್ಲ. ಕಬೀರ ಹೇಳುತ್ತಿದ್ದ: 'ಸಾಕಾರ ನನ್ನ ತಾಯಿ, ನಿರಾಕಾರ ನನ್ನ ತಂದೆ. ಯಾರನ್ನು ಹೊಗಳುವುದು, ಯಾರನ್ನು ತೆಗಳು ವುದು? ತಕ್ಕಡಿ ತಟ್ಟೆಗಳೆರಡೂ ಒಂದೆ ಸಮತೂಕ !' ಎಂದು.

❋ ಹಿಂದು, ಮುಸಲ್ಮಾನ, ಕ್ರೈಸ್ತ, ಶಾಕ್ತ, ಶೈವ, ವೈಷ್ಣವ; ಋಷಿಗಳ ಕಾಲದ ಬ್ರಹ್ಮ ಜ್ಞಾನಿಗಳು, ನೀವು, ಎಲ್ಲರೂ ಆ ಒಂದೇ ವಸ್ತುವಿಗಾಗಿ ಹುಡುಕುತ್ತಿರುವುದು. ಆದರೆ ಯಾರ ಹೊಟ್ಟೆಗೆ ಯಾವುದು ಒಗ್ಗುತ್ತದೆಯೊ, ಅದನ್ನೆ ತಾಯಿ ಅಡುಗೆ ಮಾಡು ತ್ತಾಳೆ. ಮನೆಗೆ ಮೀನು ತಂದರೆ, ಐದು ಮಕ್ಕಳಿದ್ದರೆ, ತಾಯಿ ಎಲ್ಲರಿಗೂ ಪಲಾವು, ಕಾಲಿಯಾ ಮಾಡಿ ಬಡಿಸುವುದಿಲ್ಲ. ಎಲ್ಲರ ಜೀರ್ಣಶಕ್ತಿಯೂ ಒಂದೇ ಸಮನಾಗಿ ಇರುವುದಿಲ್ಲ. ಕೆಲವರಿಗೆ ಮೀನಿನ ಸಾರು ಮಾಡಿ ಬಡಿಸುತ್ತಾಳೆ. ಆದರೂ ತಾಯಿ ತನ್ನ ಎಲ್ಲಾ ಮಕ್ಕಳನ್ನೂ ಒಂದೇ ಸಮನಾಗಿ ಪ್ರೀತಿಸುತ್ತಾಳೆ.

❋ ದೇಶಕಾಲಪಾತ್ರಕ್ಕೆ ತಕ್ಕಂತೆ ಭಗವಂತ ನಾನಾ ಧರ್ಮ ಗಳನ್ನು ಮಾಡಿದ್ದಾನೆ. ಆದರೂ ಎಲ್ಲಾ ಮತಗಳೂ ಪಥಗಳೆ. ಆದರೆ ಮತವೇ ಭಗವಂತನಲ್ಲ. ಆಂತರಿಕ ಭಕ್ತಿಯಿಂದ ಯಾವುದಾ ದರೂ ಒಂದು ದಾರಿ ಹಿಡಿಯುವುದಾದರೆ ಅದರ ಮೂಲಕವೆ ಆತನನ್ನು ಮುಟ್ಟಬಹುದು. ಶ್ರದ್ಧೆಯೊಂದಿದ್ದರೆ ಯಾವ ಮತ ಹಿಡಿದರೇನು ? ಅದರಲ್ಲಿ ತಪ್ಪಿದ್ದರೂ ಚಿಂತೆಯಿಲ್ಲ ; ಆತ ತಿದ್ದಿ ಕೊಡುತ್ತಾನೆ. ಯಾರಾದರೂ ಜಗನ್ನಾಥನನ್ನು ನೋಡಬೇಕೆಂದು ತುಂಬು ಆಕಾಂಕ್ಷೆಯಿಂದ ಹೊರಟು ದಿಕ್ಕು ತಪ್ಪಿ ದಕ್ಷಿಣಕ್ಕೆ ಹೋಗುವು ದಕ್ಕೆ ಬದಲು ಉತ್ತರಕ್ಕೆ ಹೋಗುತ್ತಿದ್ದರೆ, ಆವಶ್ಯಕವಾಗಿ ದಾರಿಯಲ್ಲಿ ಯಾರಾದರೂ ಸಿಕ್ಕಿ 'ಅಯ್ಯಾ, ಈ ದಿಕ್ಕಿಗೆ ಹೋಗಬೇಡ. ದಕ್ಷಿಣ ದಿಕ್ಕಿಗೆ ಹೋಗು' ಎಂದು ಹೇಳಿಕೊಡುತ್ತಾರೆ. ಅವನು ಒಂದಲ್ಲ ಒಂದು ದಿವಸ ಜಗನ್ನಾಥ ದರ್ಶನ ಮಾಡಿಯೇ ಮಾಡುತ್ತಾನೆ.

❋ ಒಂದು ಪಕ್ಷ ಅನ್ಯಧರ್ಮಗಳಲ್ಲಿ ಲೋಪ ದೋಷಗಳಿದ್ದರೆ, ಅದನ್ನು ಕಟ್ಟಿಕೊಂಡು ನಮ ಗೇನು? ಈ ಜಗತ್ತು ಯಾರದೊ ಆತನಿಗೆ ಅದರ ಚಿಂತನೆ. ನಮ್ಮ ಕರ್ತವ್ಯ ಹೇಗೋ ಮಾಡಿ ಜಗನ್ನಾಥನ ದರ್ಶನಮಾಡುವುದು… ಕಜ್ಜಾಯ ವನ್ನು ಉದ್ದುದ್ದವಾಗಿ ತಿನ್ನಿ ಅಡ್ಡಡ್ಡಲಾಗಿ ತಿನ್ನಿ, ಹೇಗೆ ತಿಂದರೂ ಸಿಹಿಯೇ.

❋ ಆದರೆ ಸ್ವಮತ ಭ್ರಾಂತಿ ಒಳ್ಳೆಯದಲ್ಲ. ನೀನು ಗೋಸುಂಬೆ ಕಥೆ ಕೇಳಿದ್ದೀಯ? ಒಂದು ಸಲ ಒಬ್ಬ ಒಂದು ತೋಪಿಗೆ ಹೋಗಿ ಮರದ ಮೇಲೆ ಒಂದು ಗೋಸುಂಬೆ ಕಂಡ. ಆತ ತನ್ನ ಸ್ನೇಹಿತರಿಗೆ: 'ನಾನು ಆ ತೋಪಿನಲ್ಲಿ ಒಂದು ಕೆಂಪು ಗೋಸುಂಬೆ ನೋಡಿ ಬಂದೆ' ಎಂದ. ಆತನ ನಂಬಿಕೆ ಅದು ಸಂಪೂರ್ಣ ಕೆಂಪು ಎಂದೇ. ಅದೇ ತೋಪಿನಿಂದ ಬಂದ ಇನ್ನೊಬ್ಬ: 'ನಾನು ಒಂದು ಹಸುರು ಗೋಸುಂಬೆ ನೋಡಿ ಬಂದೆ' ಎಂದ. ಆತನ ನಂಬಿಕೆ ಅದು ಅಚ್ಚ ಹಸುರು ಎಂದೇ. ಆದರೆ ಯಾರು ಆ ತೋಪಿನಲ್ಲಿ ವಾಸವಾಗಿದ್ದನೋ ಆತ ಬಂದು: 'ನೀವೇನು ಹೇಳುತ್ತಿರುವಿರೋ ಅದೆಲ್ಲಾ ಸರಿ, ಆದರೆ ಈ ಪ್ರಾಣಿ ಕೆಲವು ವೇಳೆ ಕೆಂಪಾಗಿ, ಕೆಲವು ವೇಳೆ ಹಸುರಾಗಿ ಕಾಣಿಸಿಕೊಳ್ಳುತ್ತದೆ. ಇನ್ನು ಕೆಲವು ಸಮಯ ಅದಕ್ಕೆ ಯಾವ ಬಣ್ಣವೂ ಇರುವುದಿಲ್ಲ' ಎಂದ.

❋ ನನ್ನ ಧರ್ಮವೆ ಸರಿ, ಉಳಿದವರದೆಲ್ಲ ತಪ್ಪು, ಎನ್ನುವ ಭಾವ ಒಳ್ಳೆಯದಲ್ಲ. ನಾನು ನೋಡುತ್ತಿದ್ದೇನೆ ಆತನೆ ಈ ಎಲ್ಲ ಆಗಿರುವುದನ್ನು — ಮನುಷ್ಯ, ಪ್ರತಿಮೆ, ಸಾಲಿಗ್ರಾಮ, ಎಲ್ಲದರ ಅಂತರ್ಯದಲ್ಲಿಯೂ ಆತನೊಬ್ಬನನ್ನೆ ನೋಡುತ್ತಿದ್ದೇನೆ; ಆತ ನೊಬ್ಬನನ್ನು ವಿನಾ ಎರಡನೆಯದನ್ನು ಕಾಣುತ್ತಿಲ್ಲ.

❋ ಅನೇಕರ ಭಾವನೆ ತಮ್ಮ ಮತವೆ ಸರಿ ಉಳಿದವರದೆಲ್ಲ ತಪ್ಪು — ಗೆದ್ದಿರತಕ್ಕವರು ತಾವು ಮಾತ್ರವೆ, ಉಳಿದವರೆಲ್ಲ ಸೋತಿ ದ್ದಾರೆ ಎಂದು. ಆದರೆ ಯಾರು ಮುಂದುವರಿದು ಬಂದನೊ ಆತನೂ ಒಂದು ಚಿಕ್ಕ ಅಡಚಣೆಯಿಂದ ನಿಂತುಕೊಂಡುಬಿಡ ಬಹುದು. ಆಗ, ಯಾರು ಹಿಂದಕ್ಕೆ ಬಿದ್ದಿದ್ದನೊ ಆತ ಮುಂದು ವರಿದು ಬಿಡಬಹುದು.

❋ ಭಗವಂತನನ್ನು ಮುಟ್ಟಲು ಅನೇಕ ಮಾರ್ಗಗಳಿವೆ. ಮತ ಗಳಿದ್ದಂತೆ ಪಥಗಳು. ಇದು ಕಾಳೀದೇವಾಲಯಕ್ಕೆ ಬರಲು ಅನೇಕ ಮಾರ್ಗಗಳಿರುವಂತೆ. ಆದರೆ ಕೆಲವು ಮಾರ್ಗ ನಿರ್ಮಲವಾಗಿವೆ; ಕೆಲವು ಕೊಳಕಾಗಿವೆ. ನಿರ್ಮಲ ಮಾರ್ಗದಿಂದ ಹೋಗುವುದೇ ಮೇಲು.

ಶ್ರೀರಾಮಕೃಷ್ಣ ವಚನವೇದದಿಂದ